ಸಂಸ್ಥೆಯ ಆ ಎರಡು ವಿಭಾಗಗಳಿಗೆ ಪೂರೈಸಿರುವ ಸಮವಸ್ತ್ರದ ಪ್ರಮಾಣ ರೂ.29.04 ಲಕ್ಷ ಸೆಟ್ಟುಗಳು.

ಇ) 2011–12ನೇ ಸಾಲಿನಲ್ಲಿ ಕೆ.ಹೆಚ್.ಡಿ.ಸಿ.ಯವರಿಗೆ ಸಮವಸ್ತ್ರ ಪೂರೈಕೆ ಮಾಡಿದ ಬಾಬ್ತು ಹಣ ಪೂರ್ತ ಸಂದಾಯವಾಗಿದೆ. ಯಾವುದೂ ಬಾಕಿ ಇರುವುದಿಲ್ಲ.

ಈ) ಕೆ.ಹೆಚ್.ಡಿ.ಸಿ.ಯು ನೇಕಾರರಿಂದ ಉತ್ಪಾದಿಸುತ್ತಿರುವ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಎರಡು ವಿಭಾಗಗಳ ಸಮವಸ್ತ್ರ ಪೂರೈಕೆ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗುತ್ತಿದೆ. ಇನ್ನೊಂದು ಸರ್ಕಾರದ ಉದ್ಯಮವಾದ ಕೆ.ಎಸ್.ಪಿ.ಡಿ.ಸಿ ರವರಿಗೆ ಬೆಳಗಾವಿ ವಿಭಾಗದ ಸಮವಸ್ತ್ರ ಪೂರೈಕೆ ಜವಾಬ್ದಾರಿಯನ್ನು ವಹಿಸಲು ಈಗಾಗಲೇ ಕೆ.ಟಿ.ಪಿ.ಪಿ ನಿಯಮಗಳಡಿ ದಿನಾಂಕ: 03.12.2011ರ ಅಧಿಸೂಚನೆಯನ್ವಯ ವಿನಾಯ್ತಿ ಪಡೆಯಲಾಗಿದೆ. ಮೈಸೂರು ವಿಭಾಗಕ್ಕೆ ಸಂಬಂಧಿಸಿದಂತೆ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ.

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ನಿರ್ವಹಣೆಯ ಯೋಜನೆ

706 (1104) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ನಿರ್ವಹಣೆಗೆ ಸರಕಾರದ ಯೋಜನೆಗಳು ಯಾವುವು;

ಆ) ಈ ಯೋಜನೆಗಳಿಗಾಗಿ ಸರಕಾರ ಮಾಡುತ್ತಿರುವ ವೆಚ್ಚದ ಮೊತ್ತ ಎಷ್ಟು; ರಾಜ್ಯ ಮತ್ತು ಕೇಂದ್ರ ಸರಕಾರದ ಅನುದಾನವೆಷ್ಟು (ವಿವರ ನೀಡುವುದು);

ಇ) ಸದರಿ ಉದ್ದೇಶಗಳಿಗಾಗಿ ನಿಗದಿಯಾದ ಅನುದಾನದ ಮೊತ್ತವನ್ನು ಸಕಾಲಿಕವಾಗಿ ಬಳಕೆ ಮಾಡಿ ಗ್ರಾಮೀಣ ಜನರಿಗೆ ಅನುಕೂಲ ಮಾಡಿಕೊಡುವಲ್ಲಿ ಕೊರತೆ ಕಂಡು ಬಂದಿದೆಯೇ;

ಈ) ಗ್ರಾಮೀಣ ಪ್ರದೇಶಗಳಿಗೆ ಪೂರ್ಣ ಪ್ರಮಾಣದಲ್ಲಿ ಕುಡಿಯುವ ನೀರು ಒದಗಿಸಿಕೊಡಲಾಗಿದೆಯೇ; ಇಲ್ಲವಾದಲ್ಲಿ, ಅದಕ್ಕೆ ಕಾರಣಗಳೇನು (ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ರಾಜ್ಯದ ಗ್ರಾಮೀಣ ಪ್ರದೇಶದ ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ (NRDWP) ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ನಳ ನೀರು, ಕಿರು ನೀರು, ಕೈ ಪಂಪು, ಕೊಳವೆ ಬಾವಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜೊತೆಗೆ ರಾಜ್ಯ ವಲಯದಡಿಯೂ ಸಹ ಸದರಿ ಯೋಜನೆಗಳನ್ನು ಕನಿಷ್ಠ (MNP) ಅವಶ್ಯಕತೆಗಳ ಕಾರ್ಯಕ್ರಮ ಹಾಗೂ ವಿಶೇಷ ಅಭಿವೃದ್ಧಿ ಯೋಜನೆ (SDP) ಗಳಡಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) 2011–12ನೇ ಸಾಲಿನಲ್ಲಿ NRDWP ಯೋಜನೆಯಡಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ ಅನುದಾನ ಲಭ್ಯತೆ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕೇಂದ್ರದ ಅನುದಾನ	ರಾಜ್ಯದ ಅನುದಾನ	ಪ್ರಸಕ್ತ ಸಾಲಿಗೆ ನಿಗದಿಪಡಿಸಿರುವ ಒಟ್ಟು ಅನುದಾನ
87285.00	61357.00	148642.00

ಇ) ಇಲ್ಲ.

ಈ) ಒಟ್ಟು 59,630 ಗ್ರಾಮೀಣ ಜನವಸತಿಗಳಲ್ಲಿ 24,000 ಗ್ರಾಮೀಣ ಜನವಸತಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿದೆ. ಉಳಿದ ಜನ ವಸತಿಗಳಲ್ಲಿ ನೀರು ಪೂರೈಕೆ ಪ್ರಮಾಣದಲ್ಲಿ ಏರಿಳಿತವಿದೆ ಹಾಗೂ ನೀರಿನ ಗುಣಮಟ್ಟದ ಸಮಸ್ಯೆಯಿದೆ. ಅಂತೆಯೇ, ಸಮಸ್ಯಾತ್ಮಕ ಗ್ರಾಮಗಳ ಶಾಶ್ವತ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸಲುವಾಗಿ, ಅನುದಾನ ಲಭ್ಯತೆ ಹಾಗೂ ತಾಂತ್ರಿಕ ಕಾರ್ಯಸಿಂಧುತ್ವ ಆಧರಿಸಿ, ಹಂತ ಹಂತವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.